**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕ. 25-03-2021**

**ಪಾಟೀ ಸವಾಲು - ಶ್ರೀ. ಕೆಎಸ್ ವಕೀಲರಿಂದ**

3) ನನ್ನ ತಾತನ ತಂದೆಯ ಹೆಸರು ರಾಮಯ್ಯ ಎಂದರೆ ಸರಿ. ನನ್ನ ತಾತ ಚಿಕ್ಕ ಕಾಕಪ್ಪನಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಅವರ ಪೈಕಿ ಮೊದಲನೆಯ ಮಗ ಮುನಿವೆಂಕಟಪ್ಪ ಮತ್ತು ಆತನ ಹೆಂಡತಿ ಮುನಿಯಮ್ಮ ಇಬ್ಬರೂ ಮೃತ ಪಟ್ಟಿದ್ದಾರೆ ಎಂದರೆ ಸರಿ. ಸದರಿ ಮುನಿವೆಂಕಟಪ್ಪನಿಗೆ ಕೃಷ್ಣಪ್ಪ, ಕಾಕಪ್ಪ ಮತ್ತು ಗೌಡಪ್ಪ ಎಂಬ ಮೂವರು ಮಕ್ಕಳು ಎಂದರೆ ಸರಿ. ಚಿಕ್ಕ ಕಾಕಪ್ಪನ ಎರಡನೇ ಮಗ ಪಿಳ್ಳಪ್ಪ ಮತ್ತು ಆತನ ಹೆಂಡತಿ ಬೈಯಮ್ಮ ಕೂಡ ಮೃತ ಪಟ್ಟಿದ್ದಾರೆ ಎಂದರೆ ಸರಿ. ಸದರಿ ಪಿಳ್ಳಪ್ಪನಿಗೆ ರತ್ನಮ್ಮ, ಕೃಷ್ಣಪ್ಪ, ನಾರಾಯಣಸ್ವಾಮಿ ಮತ್ತು ವೆಂಕಟೇಶ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ಚಿಕ್ಕ ಕಾಕಪ್ಪನ ಮೂರನೇ ಮಗ ಲಕ್ಷ್ಮಯ್ಯ ಮತ್ತು ಆತನ ಹೆಂಡತಿ ಕಾಳಮ್ಮ ಕೂಡ ಮೃತ ಪಟ್ಟಿದ್ದು ಅವರ ಮಕ್ಕಳು ಅಶ್ವತ್ಥ ಮತ್ತು ನಾರಾಯಣ ಎಂದರೆ ಸರಿ. ಚಿಕ್ಕ ಕಾಕಪ್ಪನ ನಾಲ್ಕನೇ ಮಗ ರಾಮಯ್ಯನೇ ನನ್ನ ತಂದೆ ಎಂದರೆ ಸರಿ. ನನ್ನ ತಂದೆಯ ವಾರಸುದಾರರೇ ವಾದಿ ನಂ.1(ಎ) ಯಿಂದ 1(ಡಿ) ಇರುತ್ತಾರೆ. ನನ್ನ ತಾತ ಚಿಕ್ಕ ಕಾಕಪ್ಪನಿಗೆ ಸರ್ವೆ ನಂ.60/3, 35/1, 56, 36, 77/3, 5, 46 ರಲ್ಲಿ ಇರುವ ಈ ಎಲ್ಲಾ ಜಮೀನುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಈ ಎಲ್ಲಾ ಸರ್ವೆ ನಂಬರ್‌ಗಳ ಪೈಕಿ ನಮಗೆ ಯಾವುದೇ ಪ್ರತ್ಯೇಕ ಆಸ್ತಿ ಇಲ್ಲ, ಎಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಈ ಎಲ್ಲಾ ಜಮೀನುಗಳಲ್ಲೂ ಒಟ್ಟು ಕುಟುಂಬದ ಸದಸ್ಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಮ್ಮ ಜಮೀನಿನಲ್ಲಿ ನಾವು ಸ್ವಾಧೀನ ಇದ್ದೇವೆ. ನಮ್ಮದು ಎಂದು ತೋರಿಸುವ ಬಗ್ಗೆ ಕಾಗದ ಪತ್ರಗಳನ್ನು ಮಾಡಿಕೊಂಡಿದ್ದೀವಾ ಎಂದರೆ ಪಂಚಾಯಿತಿದಾರರ ಮುಂದೆ ಪಾಲು ವಿಭಾಗ ಮಾಡಿಕೊಂಡಿದ್ದೇವೆ. ಯಾರು ಯಾರಿಗೆ

ಯಾವ ಯಾವ ಜಮೀನುಗಳು ಎಂಬ ಬಗ್ಗೆ ಬರವಣಿಗೆ ಮಾಡಿಕೊಂಡಿಲ್ಲ ಎಂದರೆ ಬರವಣಿಗೆ ಮಾಡಿಕೊಂಡಿಲ್ಲ, ಆದರೆ ಖಾತೆ ಆಗಿರುವ ಪ್ರಕಾರ ಸ್ವಾಧೀನ ಇದ್ದೇವೆ. ನಾವು ದಾವೆ ಹಾಕಿರುವುದು ಸರ್ವೆ ನಂ.60/3 ರ ಬಗ್ಗೆ. ಸದರಿ ಜಮೀನಿನ ಪೂರ್ವ ದಿಕ್ಕಿನ ಉತ್ತರ ಭಾಗದಲ್ಲಿ ಮುನಿಶಾಮಪ್ಪನ ಮಗ ರಾಜಣ್ಣನ ಜಮೀನು ಎಂದರೆ ನಂಜುಂಡಪ್ಪನವರ ಆಂಜಿನಪ್ಪನ ಜಮೀನು ಇದೆ. ಪೂರ್ವದಿಂದ ದಕ್ಷಿಣಕ್ಕೆ ಆಂಜಿನಪ್ಪನ ಮಗ ಆಂಜಿನಪ್ಪನ ಜಮೀನು ಎಂದರೆ ಸರ್ಕಾರಿ ಕಾಲುವೆ ಇದೆ. ಪಶ್ಚಿಮಕ್ಕೆ ದ್ಯಾವಮ್ಮನ ಮಗ ಚಿಕ್ಕ ಮುನಿಯಪ್ಪನ ಜಮೀನಿದೆ ಎಂದರೆ ಸರಿ. ಉತ್ತರಕ್ಕೆ 12 ಅಡಿ ರಸ್ತೆ ಇದೆ ಎಂದರೆ ಮೊದಲು ಸರ್ಕಾರಿ ಕಾಲುವೆ ಇತ್ತು. ಇತ್ತೀಚೆಗೆ ರಸ್ತೆ ಮಾಡಿದ್ದಾರೆ. ಆ ರಸ್ತೆ ಮಾಡಿ ಮೂರು ವರ್ಷ ಆಗಿದೆ. ಸರ್ವೆ ನಂ.60/3 ರ ದಕ್ಷಿಣಕ್ಕೆ ಕಾಲುವೆ ಖರಾಬು ಇದೆ ಎಂದರೆ ಸರಿ. ಈ ಜಮೀನಿನಲ್ಲಿ ನನ್ನ ದೊಡ್ಡಪ್ಪ ಪಿಳ್ಳಪ್ಪ ಎರಡು ಬೋರ್‌ವೆಲ್ ಹಾಕಿಸಿ ಪಂಪ್ ಹೌಸ್ ನಿರ್ಮಿಸಿದ್ದಾರೆ ಎಂದರೆ ಸುಳ್ಳು. ಪಿಳ್ಳಪ್ಪ 1973ರಲ್ಲಿ ತೆರೆದ ಬಾವಿ ನಿರ್ಮಿಸಿ ಮೆಷಿನ್ ಮನೆ ನಿರ್ಮಿಸಿದ್ದರು ಎಂದರೆ ಸುಳ್ಳು. 1990 ರಲ್ಲಿ ಕೊಳವೆ ಬಾವಿ ಹಾಕಿಸಿದರು ಎಂದರೆ ಅದೂ ಕೂಡ ಸುಳ್ಳು. ಕಳೆದ ಆರು ತಿಂಗಳಲ್ಲಿ ಪ್ರತಿವಾದಿಗಳು ಇನ್ನೊಂದು ಕೊಳವೆ ಬಾವಿಯನ್ನು ಸರ್ವೆ ನಂ.60/3 ರಲ್ಲಿ ಹಾಕಿಸಿದ್ದಾರೆ ಎಂದರೆ ಸುಳ್ಳು. ಆ ಕೊಳವೆ ಬಾವಿಗೆ ಪ್ರತಿವಾದಿಗಳು ಪಿಳ್ಳಪ್ಪನ ಹೆಸರಲ್ಲೇ ಬೆಸ್ಕಾಂ ನಿಂದ ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ಅವರೇ ಟ್ರಾನ್ಸ್‌ಫಾರ್ಮರ್ ಕೂಡ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. 1973 ರಿಂದ ಈ ದಿನಾಂಕದವರೆಗೆ ಪಿಳ್ಳಪ್ಪನ ಮಕ್ಕಳೇ ಆ ಜಮೀನಿನಲ್ಲಿ ಸ್ವಾಧೀನ ಹೊಂದಿ ತರಕಾರಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸುಳ್ಳು. ನಾವೇ ಸ್ವಾಧೀನ ಇದ್ದೇವೆ. ನಾನು ಮತ್ತು ನನ್ನ ತಂದೆ ಯಾವತ್ತೂ ಸರ್ವೆ ನಂ.60/3 ರಲ್ಲಿ ಸ್ವಾಧೀನ ಹೊಂದಿರಲಿಲ್ಲ ಎಂದರೆ ನಾವೇ ಸ್ವಾಧೀನ ಹೊಂದಿ, ಕೊಳವೆ ಬಾವಿ ಹಾಕಿಸಿ ಬೆಳೆ ಬೆಳೆಯುತ್ತಿದ್ದೇವೆ. ಸರ್ವೆ ನಂ.60/3

ರಲ್ಲಿ ಪ್ರತಿವಾದಿಗಳು ಈಗ ಏನು ಬೆಳೆ ಇಟ್ಟಿದ್ದಾರೆ ಎಂದು ಕೇಳಿದರೆ ನಾವೇ ಸ್ವಾಧೀನ ಇದ್ದೇವೆ. ಈಗ ಆ ಜಮೀನಿನಲ್ಲಿ ಕ್ಯಾರೆಟ್ ಮತ್ತು ಬೀಟ್‌ರೂಟ್ ಬೆಳೆ ಇರುತ್ತದೆ. ಆ ಜಮೀನಿನಲ್ಲಿ ಕ್ಯಾರೆಟ್ ಮತ್ತು ನವಿಲು ಕೋಸಿನ ಬೆಳೆಯನ್ನು ಪ್ರತಿವಾದಿಗಳೇ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಯಾವ ಸಮಯದಲ್ಲೂ ಸರ್ವೆ ನಂ.60/3 ರಲ್ಲಿ ಸ್ವಾಧೀನ ಹೊಂದಿ ಬೆಳೆ ಬೆಳೆಯದಿದ್ದರೂ ಮತ್ತು ಪ್ರತಿವಾದಿಗಳೇ ಸ್ವಾಧೀನ ಹೊಂದಿ ಬೆಳೆ ಬೆಳೆಯುತ್ತಿದ್ದರೂ ಕೂಡ ನಾನು ನಾವೇ ಸ್ವಾಧೀನ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನದಲ್ಲಿರುವ ಸದರಿ ಜಮೀನಿನ ಕುರಿತಂತೆ ಇಲ್ಲಿಯವರೆಗೆ ನಾವು ಯಾವತ್ತೂ ಪ್ರತಿವಾದಿಗಳ ಸ್ವಾಧೀನವನ್ನು ಪ್ರಶ್ನೆ ಮಾಡಿಲ್ಲ ಎಂದರೆ ಆ ಜಮೀನಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿಲ್ಲ ನಾವೇ ಸ್ವಾಧೀನ ಇದ್ದೇವೆ. ಪ್ರತಿವಾದಿಗಳು ಸ್ವಾಧೀನ ಇರುವ ಕಾರಣದಿಂದ ಅವರು ತೊಂದರೆ ಕೊಟ್ಟಿದ್ದಾರೆ ಎಂಬ ಆಪಾದನೆ ಮಾಡಿ ನಾವು ಪೋಲೀಸರಿಗಾಗಲೀ, ಊರಿನ ಪ್ರಮುಖರಿಗಾಗಲೀ ಯಾವುದೇ ದೂರು ಕೊಟ್ಟಿಲ್ಲ ಎಂದರೆ ನಾವೇ ಸ್ವಾಧೀನ ಇರುವಾಗ ನಾವು ಯಾಕೆ ದೂರು ಕೊಡಬೇಕು?

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಲಾಯಿತು**).**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**